Udayavani - 01/11/19

# ಮಕ್ಕಳ ಚಲನಚಿತ್ರೋತ್ಸವ ವ್ಯವಸ್ಥಿತವಾಗಿ ಆಯೋಜಿಸಿ



**ಕೊಪ್ಪಳ: ಮಕ್ಕಳ ಚಲನಚಿತ್ರೋತ್ಸವ ನಿಮಿತ್ತ ನಡೆದ ಪೂರ್ವಭಾವಿ ಸಭೆಯಲ್ಲಿ ಎಡಿಸಿ ಎಂ.ಪಿ. ಮಾರುತಿ ಮಾತನಾಡಿದರು.**

**ಕೊಪ್ಪಳ:** ನವೆಂಬರ್ ಎರಡನೇ ವಾರದಿಂದ ಭಾರತೀಯ ಮಕ್ಕಳ ಚಲನಚಿತ್ರ ಸೊಸೈಟಿಯಿಂದ ನಡೆಯುವ ಮಕ್ಕಳ ಚಲನಚಿತ್ರೋತ್ಸವವನ್ನು ವ್ಯವಸ್ಥಿತವಾಗಿ ಆಯೋಜಿಸುವಂತೆ ಅಪರ ಜಿಲ್ಲಾಧಿಕಾರಿ ಎಂ.ಪಿ. ಮಾರುತಿ ಹೇಳಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜರುಗಿದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಮಕ್ಕಳಲ್ಲಿ ಸಾಮಾಜಿಕ ಪ್ರಜ್ಞೆ, ಜವಾಬ್ದಾರಿ ಮೂಡಿಸುವ ಚಲನಚಿತ್ರಗಳನ್ನು ಜಿಲ್ಲೆಯ ವಿವಿಧ ಚಿತ್ರಮಂದಿರಗಳಲ್ಲಿ ಪ್ರದರ್ಶಿಸುತ್ತಿದೆ. ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹಭಾಗಿತ್ವದಲ್ಲಿ ಚಲನಚಿತ್ರೋತ್ಸವ ನಡೆಯುತ್ತಿರುವುದರಿಂದ ಆಯಾ ಚಿತ್ರಮಂದಿರಗಳ ಹತ್ತಿರದ ಶಾಲೆಗಳಿಂದ ಮಕ್ಕಳನ್ನು ಆಯ್ಕೆ ಮಾಡಿ, ಮಕ್ಕಳ ಸುರಕ್ಷತೆಗಾಗಿ ಅಗತ್ಯ ಪ್ರಮಾಣದ ಶಿಕ್ಷಕರನ್ನು ನಿಯೋಜಿಸಬೇಕು. ಚಲನಚಿತ್ರೋತ್ಸವ ಆಯೋಜಕರಿಗೆ ಸ್ಥಳೀಯವಾಗಿ ಹೆಚ್ಚಿನ ಪರಿಚಯವಿರದ ಕಾರಣ ಆಯೋಜಕರೊಂದಿಗೆ ಸಾರ್ವಜನಿಕ ಶಿಕ್ಷಣ ಇಲಾಖೆ ಸಿಬ್ಬಂದಿ ನಿರಂತರವಾಗಿ ಸಂಪರ್ಕದಲ್ಲಿದ್ದು ಚಲನಚಿತ್ರೋತ್ಸವಕ್ಕೆ ಯಾವುದೇ ತೊಂದರೆಯಾಗದಂತೆ ಕಾರ್ಯನಿರ್ವಹಿಸಿ ಎಂದರು.

ಕೊಪ್ಪಳದಲ್ಲಿ ಶಿವ ಹಾಗೂ ಶ್ರೀ ಲಕ್ಷ್ಮೀ ಚಿತ್ರಮಂದಿರ, ಯಲಬುರ್ಗಾದಲ್ಲಿ ಮಂಜುನಾಥ, ಪ್ರವೀಣ ಹಾಗೂ ಶಕ್ತಿ ಚಿತ್ರಮಂದಿರಗಳಲ್ಲಿ, ಗಂಗಾವತಿಯಲ್ಲಿ ಕನಕದುರ್ಗಾ ಹಾಗೂ ಶಿವ ಚಿತ್ರಮಂದಿರಗಳಲ್ಲಿ ಅವರ ದೈನಂದಿನ ಪ್ರದರ್ಶನಗಳಿಗೆ ತೊಂದರೆಯಾಗದಂತೆ ಪ್ರತಿದಿನ ಬೆಳಗ್ಗೆ 9ರಿಂದ 10:30ರವರೆಗೆ ಮಕ್ಕಳ ಚಲನಚಿತ್ರಗಳು ಪ್ರದರ್ಶನವಾಗಲಿವೆ. ಪ್ರತಿ ಪ್ರದರ್ಶನಕ್ಕೂ ಚಿತ್ರಮಂದಿರಗಳಿಗೆ ಸೊಸೈಟಿಯಿಂದ ನಿಗದಿ ಪಡಿಸಿದ 2500 ರೂ. ನೀಡಲಾಗುತ್ತದೆ. ಆಯ್ಕೆಯಾದ ಚಿತ್ರಮಂದಿರಗಳ ಮಾಲೀಕರು ಅಥವಾ ವ್ಯವಸ್ಥಾಪಕರು ಮಕ್ಕಳ ಚಲನಚಿತ್ರ ಪ್ರದರ್ಶನಕ್ಕೆ ಸಹಕರಿಸಬೇಕು ಎಂದರು. ವಿ.ಎಸ್. ಅಗಿಲಾ, ಜೆ.ಬಿ. ಮಜ್ಜಿ, ಡಿವೈಎಸ್‌ಪಿ ವೆಂಕಟಪ್ಪನಾಯಕ ಇತರರಿದ್ದರು.

Scanned by CamScanner